ಶ್ರೀ ಸಿದ್ದಯ್ಯ ಕಾಲಿಮಠ್.—ಸ್ವಾಮಿ, ಪ್ರತಿಯೊಂದು ಸಾರಿಯೂ ಕೂಡ ಅವಶ್ಯಕವಾದ ರೈಸಿನ ಸಾಮಗ್ರಿಗಳು ದೊರೆಯದಿದ್ದ ಕಾರಣ ಆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಲಲ್ಲ ಎಂದು ಹೇಳುತ್ತಿದ್ದೀರಿ ; ಹಾಗಾದರೆ ನಮ್ಮ ದೇಶದಲ್ಲಿ ಯಾವ ಯಾವ ಮೆಟೀರಿಯಲ್ಸ್ ತಯಾರಾಗುತ್ತವೆ, ಪರದೇಶದಿಂದ ಯಾವ ಯಾವ ಮೆಟೀರಿಯಲ್ಸ್ ತರಿಸಬೇಕಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿ ಕಂಬಗಳು ಸಿಗುತ್ತವೆ. ಟವರ್‌ಗಳಿಗೆ ಬೇಕಾಗುವ ಕಬ್ಬಿಣ ಸಿಕ್ಕುತ್ತದೆ, ಸಣ್ಣಸಣ್ಣ ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಇಲ್ಲಯೇ ತಯಾರು ಮಾಡುತ್ತಿದ್ದಾರೆ, ದೊಡ್ಡ ದೊಡ್ಡ ಟ್ರಾನ್ಸ್‌ಫಾರ್ಮರ್‌ಗಳನ್ನು ಪರದೇಶದಿಂದ ತರಿಸಬೇಕಾಗುತ್ತದೆ. ತಂತಿಯು ಸಿಕ್ಕುವುದು ಬಹಳ ಕಷ್ಟ, ಅದನ್ನು ಪರದೇಶದಿಂದ ತರಿಸಬೇಕಾಗುತ್ತದೆ. ಈಗ ನಮ್ಮ ದೇಶದಲ್ಲಿ ಕಾಪರ್ ಮತ್ತು ಅಲ್ಯೂಮಿನಿಯಂ ವೈರನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1966ನೇ ಇಸವಿ ಅಚ್ಚುರೊಳಗಾಗಿ ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಖಂಡಿತಾ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕೇಂದ್ರಸರ್ಕಾರದವರು ಮಹಾತ್ಮ ಗಾಂಧೀಜಿಯವರ ಶತ ಮಾನೋತ್ಸವವನ್ನು ಆಚರಿಸುವ ವೇಳೆಗೆ ನುಮಾರು ಒಂದು ಲಕ್ಷ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳಿದ್ದರು, ಆ ವೇಳೆಗೆ ಈ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಬರುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಬರುತ್ತದೆ ಎಂದು ನಾನು ಹೇಳಬಲ್ಲೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂಗಳೂರಿನಲ್ಲಿ ಕೆಲವು ವೈರುಗಳನ್ನು ದಾಸ್ತಾನು ಮಾಡಿದ್ದರು. ಅದನ್ನು ಇಲ್ಲಿಗೆ ವಾಪಸ್ಸು ತರಬೇಕೆಂದು ಹೇಳಿದ್ದರು. ಅದನ್ನು ಏನು ಮಾಡುತ್ತೀರಿ ?

Mr. SPEAKER.—How does it arise here ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲೆಲ್ಲ ಇದೆಯೆಂದು ಮಾನ್ಯ ಸದಸ್ಯರು ವರ್ತಮಾನ ಕೊಟ್ಟರೆ ಒಳ್ಳೆಯದು. ನಾವು ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಂತಿ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಅಭಾವ ಇದೆ ಎಂದು ತಾವು ಹೇಳಿದಿರಿ, ವರ್ತಕರು ಅದನ್ನು ಸಪ್ಲೈ ಮಾಡುತ್ತೇವೆ ಎಂದರೆ ಕಡಿಮೆ ರೇಟಿಗೆ ಇರಾಖೆಗೆ ಸಪ್ಲೈ ಮಾಡುತ್ತೀರಾ ಎಂದು ಇರಾಖೆಯವರು ಹೇಳುತ್ತಾರೆ ; ಅದ್ದರಿಂದ ಹೆಚ್ಚು ರೇಟು ಕೊಟ್ಟು ಆ ಸಾಮಾನುಗಳನ್ನು ತರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥಾ ಪುಕಾರು ಯಾವುದೂ ನಮಗೆ ಬಂದಿಲ್ಲ.

Irrigation Master Plan for Tumkur District.

*Q.—195. **Sri R. KENCHAPPA** (Pavagada).—

Will the Government be pleased to state:—

(*a*) When the irrigation master plan for Tumkur District was prepared and the estimated cost to the same ;

(*b*) The number of Minor and Major works estimated to be taken up in the above District (Taluk-wise information may please be furnished);

(*c*) Out of them, the number of Works completed (Taluk-wise information may be furnished) ?

*A.—**Sri ALUR HANUMANTHAPPA** (Deputy Minister for Minor Irrigation).—

(*a*) The Master Plan (1964) is yet to be finalised.

(*b*) Does not arise in view of reply to Clause (*a*).

(*c*) Does not arise in view of reply to Clause (*a*)

ಶ್ರೀ ಆರ್. ಕೆಂಚಪ್ಪ.—ಸ್ವಾಮಿ, ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಬೃಹತ್ ನೀರಾವರಿ ಯೋಜನೆಯನ್ನು ತಯಾರಿಸಬೇಕಾದರೆ ಇನ್ನೂ ಎಷ್ಟುಕಾಲ ಬೇಕಾಗುತ್ತದೆ ?

†ಶ್ರೀ ಆಲೂರು ಹನುಮಂತಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಪ್ಲಾನು ಮತ್ತು ಎಸ್ಟಿಮೇಟುಗಳು ತಯಾರಾಗಬೇಕು.

ಶ್ರೀ ಆರ್. ಕೆಂಚಪ್ಪ.—ಈಗ ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ಈ ಯೋಜನೆಯನ್ನು ಅಂತಿಮ ಗೊಳಿಸಬೇಕಾಗಿದೆ ಎಂದು ಹೇಳಿದ್ದೀರಿ, ಈಗ ತಯಾರು ಮಾಡಿರತಕ್ಕ ಯೋಜನೆಗಳು ಯಾವತರಹ ಇವೆ, ಮತ್ತು ಅವುಯಾವ ಮಟ್ಟದಲ್ಲಿವೆ ?

ಶ್ರೀ ಆಲೂರು ಹನುಮಂತಪ್ಪ.—ಈಗ ಅದು ಇನ್‌ವೆಸ್ಟಿಗೇಷನ್ ಆಗಿ ಪ್ರಿಲಿಮಿನರಿ ಸರ್ವೆ ಆಗಿದೆ, ಅದರ ಮೇರೆ ಆ ಯೋಜನೆಯ ಎಸ್ಟಿಮೇಟನ್ನು ತಯಾರು ಮಾಡುತ್ತಿದ್ದಾರೆ.

Sri M. Y. GHORPADE.—May I know whether the Government which was expecting some additional funds for minor irrigation works has been able to get funds ? If so, how much ?

Sri ALUR HANUMANTHAPPA.—For the current year we have additional assistance from the Government of India to the tune of Rs. 3,75,00,000 for all minor irrigation works put together.

Sri C. J. MUCKANNAPPA.—May I know the approximate cost of the master plan for taking up minor irrigation works and how they are going to meet the expenditure ?

ಶ್ರೀ ಆಲೂರು ಹನುಮಂತಪ್ಪ.— ಇರುವಹಾಗೆ ಅಂದಾಜುಗಳನ್ನು ತಯಾರುಮಾಡಿ ಕೊಂಡಿದ್ದೇವೆ. ತುಮಕೂರು ಜಿಲ್ಲೆಗೆ ನುಮಾರು 875 ಕೆಲಸಗಳನ್ನು 318 ಲಕ್ಷ ರೂಪಾಯಿನ ಅಂದಾಜಿನಲ್ಲಿ ಇಟ್ಟುಕೊಂಡಿದ್ದೇವೆ. ಅದರಲ್ಲಿ 19,115 ಎಕರೆ ಹೊಸ ಅಚ್ಚುಕಟ್ಟು, 4 ಸಾವಿರ ಎಕರೆ ಹಳೆಯ ಅಚ್ಚುಕಟ್ಟು ಬರುವ ಒಂದು ಅಂದಾಜು ಇದೆ.

Sri GANJI VEERAPPA.—May I know whether Pavagada Taluk in Tumkur District has been included in the Master Plan for Tumkur ?

Sri G. B. SHANKAR RAO (Parliamentary Secretary to the Minister or Public Works).—The Master Plan is under preparation and it will be finalised. Pavagada Taluk will be included.

ಶ್ರೀ ಎಚ್. ಡಿ. ದೇವೇಗೌಡ.—ಈ ಬೃಹತ್ ಯೋಜನೆಯನ್ನು ಇನ್ನೂ ಅಂತಿಮಗೊಳಿಸ ಬೇಕಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಸರಕಾರದ ನೀತಿ ಏನು ? ಪ್ರತಿವರ್ಷವೂ ಮಾನ್ಸರ್--. ಪ್ಲಾನು ಮಾಡುತ್ತಾ ಇದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—18 ಕೋಟಿ ರೂಪಾಯಿನ ಎಸ್ಟಿಮೇಟುಗಳು ತಯಾರಾಗಿವೆ. ಇದು ಬೃಹತ್ ಯೋಜನೆ ದೇಶದ ವ್ಯಾಲಿಗಳಲ್ಲಿ ಎಷ್ಟು ನೀರು ಹೋಗುತ್ತದೆ, ಅದೆಲ್ಲದಕ್ಕೂ, ಚಿಕ್ಕದು, ದೊಡ್ಡದು ಪ್ರಾಜೆಕ್ಟು ಇವೆ. ಒಂದು ಬೃಹತ್ ಯೋಜನೆಯನ್ನು ತಯಾರುಮಾಡುವುದರಲ್ಲಿ ಇನ್ನೂ ಇದ್ದೇವೆ.

Sri M. Y. GHORPADE.—Just now the Hon'ble Minister stated that he has schemes for 3 crores of rupees. Is this amount available during the current year to take up more minor irrigation works ?

Sri ALUR HANUMANTHAPPA.—We have to complete the old works already undertaken. It has to be very seriously considered as to how best it could help in solving the problem of taking up the fresh works.

ಶ್ರೀಮತಿ ನುಶೀರಾಬಾಯಿ ಹಿರಾಜೆಂದ್‌ಷಾ.—ಈ 3 ಕೋಟಿ ರೂಪಾಯಿನ ಹೊಸ ಕೆಲಸಗಳಲ್ಲಿ ಮೈನರ್ ಇರಿಗೇಷನ್ನಿಗೆ, ಬಾವಿಗಳಿಗೆ ಎಷ್ಟಿದೆ ಎಂದು ಹೇಳುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಬ್ರೇಕಪ್ ನನ್ನಲ್ಲಿಲ್ಲ, ವಿವರಗಳನ್ನು ಬೇಕಾದರೆ ಕೊಡುತ್ತೇನೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—4 ನೇ ಪಂಚವಾರ್ಷಿಕ ಯೋಜನೆಗೆ ಕಾರ್ಯಕ್ರಮ ಗೊತ್ತು ಮಾಡುವುದಕ್ಕೆ ಪೂರ್ವಭಾವಿಯಾಗಿ, ಮಾನ್ವರ್ ಪ್ಲಾನಿಗೆ ಪ್ರಯಾರಿಟಿ ಲಸ್ಟು ನಿರ್ಧಪಡಿಸುವುದು ಅವಶ್ಯಕವಲ್ಲವೇ ?

ಶ್ರೀ ಅಲೂರು ಹನುಮಂತಪ್ಪ.—ಆ ಕೆಲಸವನ್ನೆರ್ಲಾ ಮಾಡುತ್ತಾ ಇದ್ದೇವೆ.

Consumers' Societies registered during 1962-63 and 63-64 in the State

*Q.—206. Sri SIDDAIAH KASHIMUTT (Shirahatti).—

Will the Government be pleased to state:—

(*a*) the number of Consumers Societies that are registered during 1962-63 and 1963-64 in the state ;

(*b*) whether any help or assistance is given by Government to those Societies ?

*A.—Sri RAMAKRISHNA HEGDE (Minister for Development, Panchayat Raj and Co-operation).—

(*a*) (i) Number registered during 1962-63 ... 150
(ii) Number registered during 1963-64 ... 218

(*b*) Yes.

Sri SIDDAIAH KASHIMUTT.—You have stated in answer to (*b*) that assistance is given to these Consumer Societies. May I know what are those facilities ?

Sri RAMAKRISHNA HEGDE.—I do not know what exactly, the member means by facilities.

Sri SIDDAIAH KASHIMUTT.—May I know, out of these 368 Societies how many have got subsidy and other loans ?

Sri RAMAKRISHNA HEGDE.—If the Hon'ble member wants to know about the scheme, I would like to state that there are 3 categories that we have recognised. (i) Whole sale Consumers Stores. The total capital by way of share capital and loan, for working capital and subsidy each one of these Whole-sale Consumers Stores will get 4 lakhs of Rupees and the Primary Consumer Societies will be given 2,500 Rupees by way of share capital and 2,000 Rupees by way of Managerial Subsidy. Besides we have also taken up Consumer Stores activities in rural areas and recognised the Taluk Marketing Societies and also Primary Societies for this purpose. The Taluk Marketing Societies will get 3,000 Rupees by way of managerial subsidy.

Sri Y. MANJIAH SHETTY.—Is there any change now in the policy of starting and registering Consumer Societies ?

Sri RAMAKRISHNA HEGDE.—Well Sir, I do not know what exactly he means. This is a scheme prepared by the Government of India. The Policy is to start Whole sale Consumer Stores in every town and urban area having a population of more than 50,000. We have been pressing that every District should have one such Whole sale